ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

ಸಂಖ್ಯೆ : [illegible] 66/2012-13

ದಿನಾಂಕ :01.04.2013

## ಸುತ್ತೋಲೆ

ವಿಷಯ: ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗೆ ಕ್ರಿಯಾಯೋಜನೆ ತಯಾರಿಸುವಾಗ ಗಮನಿಸಬೇಕಾದ ಅಂಶಗಳ ಕುರಿತು.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವ ಮಹತ್ವದ ಉದ್ದೇಶದೊಂದಿಗೆ. ತ್ಯಾಜ್ಯ. ಕೊಳಚೆ ರಹಿತ ಗ್ರಾಮಗಳನ್ನು ನಿರ್ಮಾಣ ಮಾಡುವುದರೊಂದಿಗೆ. ನಿರ್ಮಲ ವಾತಾವರಣವನ್ನು ನಿರ್ಮಾಣ ಮಾಡುವುದು ಅಭಿಯಾನದ ಗುರಿಯಾಗಿದೆ. ರಾಜ್ಯದಲ್ಲಿರುವ 5627 ಗ್ರಾಮ ಪಂಚಾಯತ್‌ಗಳೂ ಕೂಡ ಹಂತ ಹಂತವಾಗಿ ಅನುಷ್ಠಾನಗೊಂಡು 2022ರ ಒಳಗೆ ಪರಿಕಲ್ಪನೆಯೊಳಗೆ ತರುವುದು ರಾಜ್ಯದ ಗುರಿಯಾಗಿದೆ.

2. ಇದಕ್ಕೆ ಸಂಬಂಧಿಸಿದಂತ ವಿವರವಾದ ಮಾರ್ಗಸೂಚಿಯನ್ನು (Government order No.RDPR/SWSM/NBA-SLWM/67/2012-13, ಬೆಂಗಳೂರು ದಿನಾಂಕ.09.11.2012) ಕಳಿಸಿದಾಗ್ಯೂ ಕೂಡ ಕೆಲವಾರು ಜಿಲ್ಲೆಗಳಿಂದ ಬಂದಂತಹ ಕ್ರಿಯಾಯೋಜನೆಯನ್ನು ಗಮನಿಸಿದಾಗ ಈ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿದೆ.

1. ಗ್ರಾಮ ಪಂಚಾಯಿತಿಯ ಸಾಮಾನ್ಯ ಮಾಹಿತಿ ಇಲ್ಲದಿರುವುದು.
2. ತ್ಯಾಜ್ಯ ಮೂಲಗಳ ವಿವರಣೆ ಇಲ್ಲದಿರುವುದು.
3. ದಿನವೊಂದಕ್ಕೆ ಉತ್ಪತ್ತಿಯಾಗುವ ತ್ಯಾಜ್ಯದ ಮಾಹಿತಿ ಇಲ್ಲದಿರುವುದು.
4. ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಸ್ಕರಣ ಘಟಕಕ್ಕೆ ಸ್ಥಳದ ಲಭ್ಯತೆ ಬಗ್ಗೆ ದಾಖಲೆ ಇಲ್ಲದಿರುವುದು.
5. ಖರೀದಿಗಳಿಗೆ ಕೋಟೇಷನ್ ಲಗತ್ತಿಸದೇ ಇರುವುದು
6. ನಿರ್ಮಾಣ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ಲಾನ್ ಮತ್ತು ಎಸ್ಟಿಮೇಟ್ ಇಲ್ಲದಿರುವುದು.
7. ಗ್ರಾಮ ಪಂಚಾಯಿತಿ ಅಧಿಕಾರಿಗಳು. ಚುನಾಯಿತ ಪ್ರತಿನಿಧಿಗಳ (ಪಿಡಿಓ ಮತ್ತು ಅಧ್ಯಕ್ಷರ) ಸಹಿ ಇಲ್ಲದಿರುವುದು.
8. ಪಂಚಾಯಿತಿ ವ್ಯಾಪ್ತಿ: ಕುಟುಂಬಗಳ ಸಂಖ್ಯೆ ಬೇರೆ ಬೇರೆಯಾಗಿದ್ದರೂ ಕ್ರಿಯಾಯೋಜನೆಗೆ ಒಂದೇ ರೀತಿಯ ಅಂದಾಜು ಪಟ್ಟಿ ತಯಾರಿಸಿರುವುದು

2....

(vi) ಒಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಘನ ಮತ್ತು ದ್ರವತ್ಯಾಜ್ಯವು ಯಾವ ಮೂಲದಿಂದ ಉತ್ಪತ್ತಿಯಾಗುತ್ತದೆ. ಹಾಗೂ ಅದರ ಪ್ರಮಾಣ ಎಷ್ಟೆಂಬುದನ್ನು ಲೆಕ್ಕಾಚಾರ ಮಾಡುವುದು ಬಹಳ ಮುಖ್ಯ.

(vii) ಈ ಪ್ರಕ್ರಿಯೆಯು ಗ್ರಾಮ ಪಂಚಾಯಿತಿಯಲ್ಲಿ ಸಾರ್ವಜನಿಕರೊಂದಿಗೆ ಚರ್ಚಿಸಿ ಅಂದಾಜು ಮಾಡತಕ್ಕದ್ದು.

4. <u>ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗೆ ಕ್ರಿಯಾಯೋಜನೆ ತಯಾರಿಸುವಾಗ ಗಮನಿಸಬೇಕಾದ ಅಂಶಗಳು:</u>

ಗ್ರಾಮದಲ್ಲಿ ಘನ ಮತ್ತು ದ್ರವತ್ಯಾಜ್ಯಧ ಮೂಲಗಳನ್ನು ಗುರ್ತಿಸಿ. ಪ್ರತಿ ದಿನವೊಂದಕ್ಕೆ ಉತ್ಪಾದನೆಯಾಗುವ ತ್ಯಾಜ್ಯವನ್ನು ಲೆಕ್ಕಾಚಾರ ಮಾಡಿ. ನಮೂದಿಸಿ. ಉದಾಹರಣೆ ಕೆಳಗಿನಂತಿದೆ:-

1. ಗ್ರಾಮದ ಒಟ್ಟು ಕುಟುಂಬಗಳಿಂದ ಉತ್ಪಾದನೆಯಾಗುವ ತ್ಯಾಜ್ಯ.
2. ಶಾಲೆಗಳು - ಬಿಸಿಊಟದ ತ್ಯಾಜ್ಯ ಹಾಗೂ ಇತರೆ ಕಸ.
3. ಅಂಗನವಾಡಿಗಳು - ಉಪಹಾರದ ತ್ಯಾಜ್ಯ ಹಾಗೂ ಇತರೆ ಕಸ.
4. ಕಿರಾಣಿ ಅಂಗಡಿಗಳಿಂದ ಹೊರಚೆಲ್ಲುವ ತ್ಯಾಜ್ಯ.
5. ಹೋಟೆಲ್‌ಗಳಿಂದ ಹೊರಚೆಲ್ಲುವ ತ್ಯಾಜ್ಯ
6. ಪೆಟ್ಟಿಗೆ ಅಂಗಡಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
7. ಟೈಲರ್ ಅಂಗಡಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
8. ಬಾರ್‌ಬರ್ (ಹಜಾಮ) ಅಂಗಡಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
9. ಹಿಟ್ಟಿನಗಿರಣಿ/ಇತರೆ ಗಿರಣಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
10. ದೇವಾಸ್ಥಾನಗಳಿಂದ ಉತ್ಪಾದನೆಯಾಗುವ ತ್ಯಾಜ್ಯ.
11. ಬಟ್ಟೆ ಅಂಗಡಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
12. ಸಮುದಾಯ ಭವನಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
13. ಕಲ್ಯಾಣ ಮಂಟಪಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
14. ಹಾಲಿನ ಸೊಸೈಟಿಯಿಂದ ಉತ್ಪತ್ತಿಯಾಗುವ ತ್ಯಾಜ್ಯ.
15. ಸಾರ್ವಜನಿಕ ಬಸ್‌ಸ್ಟ್ಯಾಂಡ್‌ಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
16. ಗ್ರಾಮ ಪಂಚಾಯಿತಿ ಹಾಗೂ ಇತರೆ ಸರ್ಕಾರಿ ಕಛೇರಿಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
17. ಅಂಗಡಿ ಮಳಿಗೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
18. ನೀರಿನ ಶುದ್ಧೀಕರಣ ಘಟಕಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
19. ಆಸ್ಪತ್ರೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.
20. ದನದ ಆಸ್ಪತ್ರೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ.

- ಯೋಜನೆ ತಯಾರಿಸುವಾಗ. ಮಾರ್ಗಸೂಚಿಯ ಪ್ರಕಾರ 20.00ಲಕ್ಷದವರೆಗೆ ಎಂಬುದನ್ನು ಗಮನದಲ್ಲಿರಿಸಿಕೊಂಡು ತಯಾರಿಸುವುದು. ಒಟ್ಟಾರೆ 20.00ಲಕ್ಷಕ್ಕೆ ಮಾಡಬೇಕೆಂದು ಖಡ್ಡಾಯವಿರುವುದಿಲ್ಲ.
- ಸಲಕರಣೆಗಳ ಖರೀದಿಗೆ ಸಂಬಂಧಿಸಿದಂತೆ ಮಾರುಕಟ್ಟೆಯ ಪ್ರಸ್ತುತ ದರಪಟ್ಟಿ ಆಧಾರವಾಗಿರತಕ್ಕದ್ದು.
- ಕ್ರಿಯಾಯೋಜನೆ ತಯಾರಿಸುವಾಗ ಪಂಚಾಯಿತಿ ಸಿಬ್ಬಂದಿ ಮತ್ತು ಚುನಾಯಿತ ಪ್ರತಿನಿಧಿಗಳು ಹಾಜರಿದ್ದು. ಸಂಬಂಧಿಸಿದ ಇಂಜನಿಯರ್‌ರವರಿಂದ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿ. ಅದರಲ್ಲಿ ಗ್ರಾಮ ಪಂಚಾಯತ್‌ನ PDO/ಕಾರ್ಯದರ್ಶಿ. ಅಧ್ಯಕ್ಷರು ಸಹಿಮಾಡಿ. ನಂತರ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಿ. ಅಂತಿಮವಾಗಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಶಿಫಾರಸ್ಸಿನೊಂದಿಗೆ ರಾಜ್ಯ ಕಛೇರಿಗೆ ಸಲ್ಲಿಸುವುದು.
- ಕ್ರಿಯಾಯೋಜನೆಯು ಆಯಾಯ ಗ್ರಾಮ ಪಂಚಾಯಿತಿಯಲ್ಲಿ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆಗೆ ಸಂಬಂದಿಸಿದಂತೆ. ಅಗತ್ಯತೆಯ ಆಧಾರದ ಮೇಲೆ ತಯಾರಿಸುವುದು. ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದ ಮಾರ್ಗಸೂಚಿಯ ಪ್ರಕಾರ ಎಲ್ಲಾ ಕ್ರಿಯಾಯೋಜನೆಗಳೂ ಕೂಡ ರಾಜ್ಯ ಮಟ್ಟದ ಅನುಮೋದನಾ ಸಮಿತಿಯಿಂದಲೇ (SLSSC) ಅನುಮೋದನೆಯಾಗುವುದರಿಂದ ಮೇಲ್ಕಂಡ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯೊಂದಿಗೆ ರಾಜ್ಯ ಕಛೇರಿಗೆ ಕಳಿಸಿಕೊಡಲು ಈ ಮೂಲಕ ಸೂಚಿಸಿದೆ.

(ಎಂ.ದೀಪಾ) 9/4/13
ನಿರ್ದೇಶಕರು.
ಸ್ವ-ಉದ್ಯೋಗ ಕಾರ್ಯಕ್ರಮಗಳು ಹಾಗೂ
ನಿರ್ಮಲ ಭಾರತ ಅಭಿಯಾನ
ಗ್ರಾ ಅ ಪಂ & ರಾಜ್ ಇಲಾಖೆ

**ಪ್ರತಿಗಳು:-**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಎಲ್ಲಾ ಜಿಲ್ಲಾ ಪಂಚಾಯತ್. ಇವರ ಮಾಹಿತಿಗಾಗಿ.
2. ಎಲ್ಲಾ ಸಮಾಲೋಚಕರು ಇವರ ಮಾಹಿತಿಗಾಗಿ.
3. ಎಲ್ಲಾ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಇವರ ಮಾಹಿತಿಗಾಗಿ.
4. ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳು ಇವರ ಮಾಹಿತಿಗಾಗಿ.